ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 95-110
©*IIMRD*, Mysuru
IIMRD JOURNALS
www.iimrd.com

# ಶಕ್ತಿಯೋಜನೆ ಮತ್ತು ಮಹಿಳಾ ಸಬಲೀಕರಣ

**ಡಾ. ನಯಾಜ್ ಅಹ್ಮದ್**
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ

**ಸಾರಾಂಶ: (Abstract)**

*ಕರ್ನಾಟಕದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರಿದ್ದಾರೆ. ಇವರ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರವು ಹಲವು ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದಿದೆ. ಪೌಷ್ಟಿಕ ಆಹಾರದಿಂದ ಹಿಡಿದು ಆರ್ಥಿಕ ಸ್ವಾವಲಂಬನೆಯವರೆಗೆ ಪ್ರತಿಯೊಂದು ಹಂತದಲ್ಲೂ ಮಹಿಳೆಯರನ್ನು ಸಶಕ್ತಗೊಳಿಸುವುದು ಸರ್ಕಾರದ ಮುಖ್ಯಗುರಿಯಾಗಿದೆ. ರಾಜ್ಯ ಸರ್ಕಾರವು 2007–08ರಿಂದಲೇ ಮಹಿಳಾ ಉದ್ದೇಶಿತ ಆಯವ್ಯಯ ಮಂಡಿಸುವ ಮೂಲಕ ಮಹಿಳೆಯರಿಗಾಗಿ ಪ್ರತ್ಯೇಕ ಅನುದಾನ ಮೀಸಲಿಡುತ್ತಿರುವುದು ವಿಶೇಷ. ಮಹಿಳೆಯರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಈ ಯೋಜನೆಯು ಸಮಾಜದಲ್ಲಿ ಸಬಲೀಕರಣ ಮತ್ತು ಸಮಾನತೆಯತ್ತ ಮಹತ್ವದ ಹೆಜ್ಜೆಯಾಗಿದೆ. ಪ್ರಸ್ತುತ ಅಧ್ಯಯನವು ಮಹಿಳೆಯರ ಸಬಲೀಕರಣದಲ್ಲಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಶಕ್ತಿಯೋಜನೆಯ ಮಹತ್ವವನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿತ್ರದುರ್ಗ ತಾಲೂಕಿನ ಮಹಿಳೆಯರನ್ನು ಸಮಗ್ರವಾಗಿ ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ ಪ್ರಸ್ತುತ ಅಧ್ಯಯನವು ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಹಾಗೂ ಮಹಿಳೆಯರ ಸಬಲೀರಣದ ಮೇಲೆ ಬೆಳಕು ಚಲ್ಲುತ್ತದೆ.*

**ಮುಖ್ಯಪದಗಳು (Keywords):** *ಮಹಿಳೆ, ಸ್ವತಂತ್ರ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿ, ಮಹಿಳಾ ಸಬಲೀಕರಣ, ಶಕ್ತಿಯೋಜನೆ*

## ಪೀಠಿಕೆ

ಜಗತ್ತಿನ ಹಾಗೂ ಯಾವುದೇ ರಾಷ್ಟ್ರದ ಸುಮಾರು ಅರ್ಧದಷ್ಟು ಜನಸಂಖ್ಯೆ ಮಹಿಳೆಯರಿಂದ ಕೂಡಿರುವುದರಿಂದ ಮಹಿಳೆಯರ ಬದುಕು, ಸ್ಥಾನಮಾನ, ಸ್ಥಿತಿಗತಿಗಳು, ಸಮಸ್ಯೆಗಳು, ಹಿತಾಸಕ್ತಿಗಳು ಮಹಿಳಾ ಅಭಿವೃದ್ಧಿ ಮುಂತಾದ ಸಂಗತಿಗಳನ್ನು ಆಲಕ್ಷಿಸುವುದೆಂದರೆ ಜಗತ್ತಿನ ಅಥವಾ ದೇಶವೊಂದರ ಅರ್ಧದಷ್ಟು ಜನಸಂಖ್ಯೆಯನ್ನು ಆಲಕ್ಷಿಸುವುದೆಂದೇ ಅರ್ಥ. ಈ ತಿಳುವಳಿಕೆಯು ಮಹಿಳಾ ವಿಷಯಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿರುವಂತೆ, ಸ್ತ್ರೀ–ಪುರುಷರ ಸಮಾನತೆಯ ತತ್ವವನ್ನು ಎತ್ತಿಹಿಡಿಯುವ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಕೂಡ ಸ್ತ್ರೀಯರ ಹಕ್ಕುಗಳು, ಸ್ತ್ರೀಯರ ಅಧಿಕಾರ, ಸ್ತ್ರೀ ಸಬಲೀಕರಣ ಮುಂತಾದವುಗಳ ಮಹತ್ವವನ್ನು ಸಾರಿಹೇಳುವುದು.

*Please cite this article as:* ನಯಾಜ್ ಅಹ್ಮದ್. (2026). ಶಕ್ತಿಯೋಜನೆ ಮತ್ತು ಮಹಿಳಾ ಸಬಲೀಕರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 95–110

**ಮಹಿಳೆ:**

ಜೈವಿಕ ಆಧಾರದ ಮೇಲೆ ಅಥವಾ ಲಿಂಗ ಬೇಧದ ನೆಲೆಯಲ್ಲಿ ಮಾನವ ಜನಾಂಗವನ್ನು ಸ್ತ್ರೀಯರು ಮತ್ತು ಪುರುಷರು ಎಂದು ಎರಡು ಸಮೂಹಗಳಾಗಿ ವರ್ಗೀಕರಿಸುವ ಪರಿಪಾಠ ಎಲ್ಲಾ ಕಡೆಗಳಲ್ಲೂ ಇದೆ. ಈ ಒಂದು ಕಾರಣಕ್ಕಾಗಿಯೇ ಅವರುಗಳ ನಡುವೆ ಬಹಳಷ್ಟು ವ್ಯತ್ಯಾಸಗಳು ಹುಟ್ಟಿಕೊಂಡಿವೆ. ಅವರುಗಳ ಆಸೆ–ಆಕಾಂಕ್ಷೆ, ಧ್ಯೇಯ–ಧೋರಣೆಗಳು, ವೇಷ–ಭೂಷಣಗಳು, ಕೆಲಸ–ಹೊಣೆಗಾರಿಕೆಗಳು ಹಾಗೂ ಪಾತ್ರ ಅಂತಸ್ತುಗಳು ಬೇರೆ ಬೇರೆಯಾಗಿವೆ. ಸ್ತ್ರೀ–ಪುರುಷರು ಎಲ್ಲಾ ದೃಷ್ಟಿಗಳಿಂದಲೂ ಸರಿಸಮಾನರಾಗಿದ್ದ ನಿದರ್ಶನ ಇತಿಹಾಸದಲ್ಲಿಲ್ಲ, ಇದ್ದಿರಬಹುದಾದರೂ ಅದನ್ನು ಕೈಗೂಡಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಿರಲಿಲ್ಲ. ಆದಾಗ್ಯೂ ಸ್ತ್ರೀಯರು–ಪುರುಷರು ತಮ್ಮದೇ ಆದ ಪ್ರತ್ಯೇಕ ಸಂಸ್ಕೃತಿಗಳನ್ನು ಹೊಂದಿದ್ದಾರೆ ಎನ್ನಲಾಗದು. ಭಾರತದ ಬಗೆಗೂ ಈ ಮಾತು ನಿಜವಾಗಿದೆ.

**ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ**

ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಬಹಳಷ್ಟು ಸುಧಾರಿಸಿದೆ. ಸ್ತ್ರೀಯರು ಇಂದು ಸಮಾನತೆಯತ್ತ ಸಾಗಿದ್ದಾರೆ ಎಂಬುದು ಒಂದು ಸಾಮಾನ್ಯ ಅಭಿಪ್ರಾಯ ಆದರೆ ಸಮಾಜಶಾಸ್ತ್ರೀಯವಾಗಿ ಸ್ತ್ರೀಯರ ಸ್ಥಾನಮಾನವನ್ನು ನಿರ್ಧರಿಸುವ ಮತ್ತು ಅಳೆಯುವ ಮಾನದಂಡ ಯಾವುದು ಎಂಬುದು ಇಲ್ಲಿ ಮುಖ್ಯ ಪ್ರಶ್ನೆಯಾಗಿದೆ. ಸಾಮಾನ್ಯವಾಗಿ ಸ್ಥಾನಮಾನ ಎಂದಾಗ ಹಕ್ಕುಗಳು ಕರ್ತವ್ಯಗಳು ಹಾಗೂ ಅವುಗಳ ವಾಸ್ತವಿಕ ಸ್ಥಿತಿ. ಅಂದರೆ ಹಕ್ಕುಗಳ ಚಲಾವಣೆ ಮತ್ತು ಕರ್ತವ್ಯಗಳ ನಿರ್ವಹಣೆ, ಇತರರಿಗೆ ಹೋಲಿಕೆ ಮಾಡಿ ನೋಡಿದಾಗ ಅವುಗಳಲ್ಲಿ ಕಂಡುಬರುವ ಸ್ಥಿತಿ – ಇವು ನಮ್ಮ ಮನಸ್ಸಿಗೆ ಬರುತ್ತವೆ. ಸ್ತ್ರೀಯರ ಸ್ಥಾನಮಾನಗಳನ್ನು ಯಾವಾಗಲು ಪುರುಷರ ಸ್ಥಾನಮಾನಕ್ಕೆ ಹೋಲಿಸಿ ನೋಡುವ ಪರಿಪಾಠ ಇಂದಿಗೂ ಇದೆ. ಇದರೊಂದಿಗೆ ಸ್ತ್ರೀಯರು ತಮಗೆ ನೀಡಲಾಗಿರುವ ಹಕ್ಕುಗಳನ್ನು, ಸ್ವಾತಂತ್ರ್ಯವನ್ನು ಅಧಿಕಾರವನ್ನು ಹೇಗೆ ಬಳಸಿಕೊಳ್ಳುತ್ತಿದ್ದಾರೆ ಹೇಗೆ ನಿರ್ಣಯಗಳನ್ನು ಕೈಗೊಳ್ಳುವರು ಮತ್ತು ನಿರ್ಧಾರಗಳನ್ನು ಕಾರ್ಯಾಚರಣೆಗೊಳಿಸುವರು ಎಂಬ ಅಂಶಗಳೂ ಇಲ್ಲಿ ಮುಖ್ಯ.

**ಸ್ತ್ರೀಯರ ಸ್ಥಾನಮಾನವನ್ನು ಎತ್ತರಿಸಲು ಸಹಾಯಕವಾದ ಸಂವಿಧಾನ ಹಾಗೂ ಶಾಸನಗಳು**

ಸ್ವತಂತ್ರ ಭಾರತದ ಸಂವಿಧಾನವು ಲಿಂಗತಾರತಮ್ಯ ಮಾಡದೆ ಸ್ತ್ರೀಯರಿಗೂ ಕೂಡ ಪುರುಷರಿಗೆ ಸಮಾನವಾದ ವೈಯಕ್ತಿಕ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ವೈವಾಹಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಸ್ವಾತಂತ್ರ್ಯ ಹೀಗೆ ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ನೀಡಿರುವುದು ಮಾತ್ರವಲ್ಲದೆ ಸಮಾನತೆ ಮತ್ತು ಸಮಾನಾವಕಾಶಗಳ ಹಕ್ಕು, ಶೋಷಣೆ ವಿರುದ್ಧದ ಹಕ್ಕು, ಮತ್ತು ಸಮಸ್ಯೆ ಸಂಕಷ್ಟಗಳಿಗೆ ಸಾಂವಿಧಾನಿಕ ಪರಿಹಾರಗಳನ್ನು ಕಂಡುಕೊಳ್ಳುವ ಹಕ್ಕುಗಳನ್ನು ನೀಡಿದೆ. ವಯಸ್ಕ ಮತದಾನದ ಹಕ್ಕನ್ನು ಸ್ತ್ರೀಯರಿಗೂ ನೀಡಿದ್ದು ಅವರನ್ನು ಯಾವುದೇ ದೃಷ್ಟಿಯಿಂದ ದ್ವಿತೀಯ ದರ್ಜೆಯ ಪ್ರಜೆಗಳನ್ನಾಗಿ ಮಾಡಿಲ್ಲ.

**ಸಾಮಾಜಿಕ ಶಾಸನಗಳು:**

ಬ್ರಿಟಿಷರ ಕಾಲದಲ್ಲಿ ಸ್ತ್ರೀಯರ ಹಿತದೃಷ್ಟಿಯಿಂದ ಕೈಗೊಳ್ಳಲಾಗಿದ್ದ ಕೆಲವು ಸಾಮಾಜಿಕ ಶಾಸನಗಳನ್ನು ತಿದ್ದುಪಡಿ ಮಾಡುವುದರ ಜೊತೆಗೆ ಅದೇ ಉದ್ದೇಶದಿಂದ ಇನ್ನೂ ಅನೇಕ ಹೊಸ ಶಾಸನಗಳನ್ನು ಕೈಗೊಳ್ಳಲಾಗಿದೆ. ಉದಾಹರಣೆಗೆ: ಹಿಂದೂ ವಿವಾಹ ಕಾಯ್ದೆ–1955, ಹಿಂದೂ ಉತ್ತರಾಧಿಕಾರ ಕಾಯ್ದೆ–1950, ಹಿಂದು ದತ್ತು ಮತ್ತು ಜಿವನಾಂಶ ಕಾಯ್ದೆ–1956, ವಿಶೇಷ ವಿವಾಹ ಕಾಯ್ದೆ1954, ವರದಕ್ಷಿಣೆ ನಿಷೇಧ ಕಾಯ್ದೆ–1961 ಮತ್ತು ಇತರೆ ಕಾಯ್ದೆಗಳು ಮಹಿಳೆಯರಿಗೆ ಸಾಮಾಜಿಕ ರಕ್ಷಣೆ ನೀಡುವಲ್ಲಿ ಸಹಾಯಕವಾಗಿವೆ ಎನ್ನಬಹುದು. ಸ್ವಾತಂತ್ರ್ಯಾನಂತರ ಮಹಿಳಾ ಶಿಕ್ಷಣ ಕ್ಷೇತ್ರದಲ್ಲಿ ಭಾರಿ ಸುಧಾರಣೆಯಾಗಿದೆ 1901ರಲ್ಲಿ ಶೇ.0.6ರಷ್ಟಿದ್ದ ಮಹಿಳಾ ಸಾಕ್ಷರತೆ 2011ರಲ್ಲಿ 65.46%ಕ್ಕೆ ಏರಿಕೆಯಾಗಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಇಂದು ಮಹಿಳೆಯರು ಉದ್ಯೋಗ, ರಾಜಕೀಯ ಹಾಗೂ ವಿವಿಧ ಕ್ಷೇತ್ರಗಳಲ್ಲಿ (ಸಾಮಾಜಿಕ, ಕಲೆ, ಸಾಹಿತ್ಯ, ಕ್ರೀಡೆ, ನ್ಯಾಯಾಂಗ, ವೈದ್ಯಕೀಯ, ವಿಜ್ಞಾನ ಮತ್ತು ತಂತ್ರಜ್ಞಾನ) ಸಾಧನೆಯನ್ನು ಮಾಡಿದ್ದಾರೆ.

**ಮಹಿಳಾ ಸಬಲೀಕರಣ ಅಥವಾ ಸಶಕ್ತೀಕರಣ ಪರಿಕಲ್ಪನೆಯ ಅರ್ಥ**

ಲಿಂಗತಾರತಮ್ಯತೆ, ಅಸಮಾನತೆ, ಅನರ್ಹತೆ ಹಾಗೂ ಇನ್ನಿತರೆ ಬಗೆಯ ಸಂಕಷ್ಟಗಳಿಗೆ ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿಸಮಾನವಾದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಾತ್ಮಕ ಕಾರ್ಯಯೋಜನೆಗಳ ಪ್ರಕ್ರಿಯೆಯನ್ನು ಮಹಿಳಾ ಸಬಲೀಕರಣ ಪ್ರಕ್ರಿಯೆ ಎನ್ನಬಹುದು.

- ಪುರುಷರಿಗೆ ಸರಿಸಮಾನವಾದ ನೆಲೆಯಲ್ಲಿ ಪಾತ್ರವಹಿಸಲು ಸಹಾಯಕವಾಗುವಂತೆ ಸ್ತ್ರೀಯರಿಗೆ ಸಮಾನವಾದ ಹಕ್ಕುಗಳನ್ನು, ಅವಕಾಶಗಳನ್ನು ಹೊಣೆಗಾರಿಕೆಗಳನ್ನು ಹಾಗೂ ಅಧಿಕಾರವನ್ನು ನೀಡುವಂತಹ ಪ್ರಕ್ರಿಯೆಯನ್ನು ಸ್ತ್ರೀಸಶಕ್ತೀಕರಣ ಎನ್ನಬಹುದು.

- ಸ್ತ್ರೀಸಶಕ್ತೀಕರಣ ಎಂದರೆ ಸ್ತ್ರೀಯರಿಗೆ ತಮ್ಮ ಜೀವನವನ್ನು ನಿಯಂತ್ರಿಸುತ್ತಾ ಬಂದಿರುವ ಇತರರಿಂದ ಮುಕ್ತಿಯನ್ನು ಪಡೆದುಕೊಳ್ಳಲು ಹಾಗೂ ತಮ್ಮ ಜೀವನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಗಳನ್ನು ತಾವೇ ಸುಧಾರಿಸಿಕೊಳ್ಳಲು ಸೂಕ್ತವಾದ ಶಕ್ತಿಯನ್ನು ನೀಡುವುದೆಂದರ್ಥ.

**ಮಹಿಳಾ ಸಬಲೀಕರಣ ಪರಿಕಲ್ಪನೆಯು ಆರಂಭಗೊಂಡಿದ್ದರ ಹಿನ್ನೆಲೆ**

ಇತಿಹಾಸದುದ್ದಕ್ಕೂ ಸ್ತ್ರೀಯರನ್ನು "ಅಬಲೆಯರು" ಅಥವಾ "ದುರ್ಬಲರು" ಎಂದು ಪರಿಗಣಿಸಲಾಗಿತ್ತಲ್ಲದೆ. ಅವರನ್ನು "ದ್ವಿತೀಯ ದರ್ಜೆಯ ಪ್ರಜೆಗಳು" ಎಂಬಂತೆಯೇ ನೋಡಿಕೊಳ್ಳಲಾಗುತ್ತಿತ್ತು. ಕುಟುಂಬ ನಿರ್ವಹಣೆಯ ಹೊಣೆಹೊತ್ತವರು ಎಂಬ ಅರ್ಥದಲ್ಲಿ ಅವರನ್ನು "ಮನೆ ನಿರ್ಮಾತೃಗಳು" ಎಂದು ಕೂಡ ಕರೆಯುವುದಿತ್ತು. ಕಾಲಸಂದಂತೆ ಸ್ತ್ರೀಯರ ಬಗೆಗಿನ ದೃಷ್ಟಿಕೋನ ಬದಲಾಯಿತು. 20ನೇ ಶತಮಾನದ ಆದಿಭಾಗದಲ್ಲಿ ಬ್ರಿಟನ್ ಮತ್ತು ಅಮೇರಿಕಾಗಳಲ್ಲಿ ಸ್ತ್ರೀಯರಿಗೂ ಮತದಾನದ ಸಮಾನ ಹಕ್ಕನ್ನು ನೀಡಿದ ಮೇಲಂತೂ ಪಶ್ಚಿಮದ ಸಮಾಜಗಳಲ್ಲಿ ಅವರ ಅಂತಸ್ತಿನಲ್ಲಿ

ಭಾರಿಸುಧಾರಣೆಯಾಯಿತು. ಅವರ ಅದೆಷ್ಟೋ ಅನರ್ಹತೆಗಳು ದೂರವಾದವು. ಹೆಚ್ಚಿನ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾದ ಅವಕಾಶ ಹಕ್ಕುಗಳನ್ನು ಸ್ತ್ರೀಯರಿಗೂ ನೀಡಲಾಯಿತು.

ಆದರೆ ಆಫ್ರಿಕಾ ಹಾಗೂ ಏಷ್ಯಾಗಳಲ್ಲಿನ ಸ್ತ್ರೀಯರು 20ನೇ ಶತಮಾನದ ದ್ವಿತೀಯಾರ್ಧದಲ್ಲಿಯೂ ಪುರುಷರಿಗೆ ಸರಿಸಮಾನವಾದ ಅಂತಸ್ತನ್ನು ಪಡೆಯುವುದು ಸಾಧ್ಯವಾಗಲಿಲ್ಲ. ಅನೇಕ ಬಗೆಯ ಅನರ್ಹತೆಗಳ ಆರೋಪಗಳನ್ನು ಹೊತ್ತ ಸ್ತ್ರೀಯರ ಶೋಷಣೆ ಒಂದಲ್ಲ ಒಂದು ರಿತಿಯಲ್ಲಿ ನಡದೇ ಇತ್ತು. ಸ್ತ್ರೀಯರಿಗೆ ಅವರು **"**ಸ್ತ್ರೀಯರು**"** ಎಂಬ ಲಿಂಗಾಧಾರಿತ ಕಾರಣದಿಂದ ಪುರುಷರಿಗೆ ಸಮಾನವಾದ ಹಕ್ಕು ಹಾಗೂ ಅವಕಾಶಗಳ ನಿರಾಕರಣೆ ಒಂದೇ ಸಮನೇ ನಡೆದೇ ಇತ್ತು. ಈ ಬೆಳವಣಿಗೆಯನ್ನು **"**ಲಿಂಗತಾರತಮ್ಯತೆಯ**"** ಸಮಸ್ಯೆ ಎಂದು ಪರಿಗಣಿಸಲಾಯಿತು. **ವಿಶ್ವಸಂಸ್ಥೆ** ಕೂಡ ತನ್ನ ಹಲವಾರು ಸಭೆ ಹಾಗೂ ಪ್ರಕಟಣೆಗಳಲ್ಲಿ ಈ ತಾರತಮ್ಯವನ್ನು ಆದಷ್ಟು ಬೇಗನೇ ಕೊನೆಗಾಣಿಸಬೇಕೆಂದು ಕರೆ ನೀಡಿತು. ಸ್ತ್ರೀಯರ ಯಾತನೆ–ಪೀಡನೆಗಳು, ಸಮಸ್ಯೆಗಳು ಹಾಗೂ ಅನರ್ಹತೆಗಳು, ಅವರ ಬಗೆಗಿನ ಅನಾದರ–ಅಸಡ್ಡೆ ಹಾಗೂ ಅಪಮಾನಗಳು ಇತಿಹಾಸಕ್ಕೆ ಸಂದುಹೋದ ಸಂಗತಿಯಾಗಬೇಕೆಂದು ಸಾರಲಾಯಿತು.

**ಶಕ್ತಿ ಯೋಜನೆ**

ಮಹಿಳೆಯರಿಗೆ ರಾಜ್ಯದೊಳಗೆ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಒದಗಿಸುತ್ತದೆ. ಕೆಎಸ್ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ಎಲ್ಲಾ ನಿಗಮಗಳ ಸಾಮಾನ್ಯ ಬಸ್ಸುಗಳಲ್ಲಿ ಮಹಿಳೆಯರು, ವಿದ್ಯಾರ್ಥಿನಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಉಚಿತವಾಗಿ ಸಂಚರಿಸಬಹುದು. ಇದು ಮಹಿಳೆಯರ ಉದ್ಯೋಗ ಮತ್ತು ಸಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆಯನ್ನು ಉತ್ತೇಜಿಸುತ್ತದೆ.

**ಮಹಿಳಾ ಸ್ವಾವಲಂಬನೆಯ ಯಶೋಗಾಥೆ ಶಕ್ತಿ ಯೋಜನೆ:**

ಪ್ರಗತಿಪರ ಚಿಂತನೆಯ ಮಾನ್ಯ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಮಹಿಳೆಯರ ಸ್ವಾವಲಂಬಿ ಬದುಕಿಗೆ ನೆರವಾಗಲು **"**ಶಕ್ತಿ**"** ಯೋಜನೆ ಜಾರಿ ಮಾಡಿದರು. ಪುರುಷರಿಗೆ ಸಮಾನರಾಗಿ ಎಲ್ಲಾ ರಂಗಗಳಲ್ಲಿ ಸಾಧನೆ ಮಾಡುತ್ತಿರುವ ಮಹಿಳೆಯರಿಗೆ ಇನ್ನಷ್ಟು ಶಕ್ತಿ ತುಂಬಲು ರಾಜ್ಯದ ಮೂಲೆ ಮೂಲೆಗೂ ಸರಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣದ ಅವಕಾಶ ಕಲ್ಪಿಸಿದರು. ಇದರಿಂದ ರಾಜ್ಯದ ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಜೊತೆಗೆ, ಸಬಲೀಕರಣ ಸಾಧ್ಯವಾಗಿದೆ.

2023 ಜೂನ್ 11 ರಂದು ಜಾರಿಗೆ ಬಂದ ಈ ಯೋಜನೆಯಡಿ ಮಹಿಳೆಯರು ಈವರೆಗೆ ಒಟ್ಟು 640 ಕೋಟಿ ಟಿಕೆಟ್ (ಜನವರಿ 2026) ಪಡೆದು ಉಚಿತವಾಗಿ ಪ್ರಯಾಣಿಸಿದ್ದು, ಈ ಉದ್ದೇಶಕ್ಕೆ ರಾಜ್ಯ ಸರ್ಕಾರ ಒಟ್ಟು 16,625 ಕೋಟಿ ರೂಪಾಯಿ ವೆಚ್ಚ ಮಾಡಿದೆ. ರಾಜ್ಯದ ಎಲ್ಲಾ ನಾಲ್ಕು ಸಾರಿಗೆ ನಿಗಮದ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಈ ಸೌಲಭ್ಯದಿಂದಾಗಿ ಮಹಿಳೆಯರ ಬದುಕಿನಲ್ಲಿ ಮಹತ್ವದ ಸುಧಾರಣೆ ಸಾಧ್ಯವಾಗಿದೆ.

ಪ್ರವಾಸಿ ತಾಣ, ಧಾರ್ಮಿಕ ಸ್ಥಳಗಳು ಒಳಗೊಂಡು ಮಹಿಳೆಯರು ರಾಜ್ಯದ ಮೂಲೆ ಮೂಲೆಗೂ ಸರಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡುತ್ತಿದ್ದಾರೆ. ವಿಶೇಷವಾಗಿ ದುಡಿಯುವ ಮಹಿಳೆಯರು, ವ್ಯಾಸಂಗ ಮಾಡುವ ಹೆಣ್ಣು ಮಕ್ಕಳ ಕನಸಿಗೆ ರೆಕ್ಕೆ ಮೂಡಿದಂತಾಗಿದೆ. ವಿಶೇಷವಾಗಿ ಬಡವರ ಪಾಲಿಗೆ ಈ ಯೋಜನೆ ನಿಜಕ್ಕೂ ಶಕ್ತಿ ತಂದಿದ್ದು, ಗಾರ್ಮೆಂಟ್ಸ್ ಕೆಲಸಗಾರರು, ಮನೆ ಕೆಲಸಗಾರರು, ದಿನಗೂಲಿ ಕಾರ್ಮಿಕರು ಹಾಗೂ ವ್ಯಾಪಾರಸ್ಥ ಮಹಿಳೆಯರ ಪ್ರಯಾಣದ ವೆಚ್ಚ ಉಳಿತಾಯವಾಗಿ ಬಡ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬಗಳಿಗೆ ಅನುಕೂಲವಾಗಿದೆ.

**ಕೈಗೂಡಿದ ಕನಸು (ಪವಿತ್ರ ಕ್ಷೇತ್ರಗಳ ದರ್ಶನ ಭಾಗ್ಯ)**

ಬಹಳಷ್ಟು ಮಹಿಳೆಯರಿಗೆ ದೂರದ ಧಾರ್ಮಿಕ ಸ್ಥಳಗಳಿಗೆ ಹೋಗಿಬರುವ ಮಹತ್ವಾಕಾಂಕ್ಷೆಯನ್ನು ಕೈಗೂಡುವಂತೆ ಮಾಡಿದೆ. ರಾಜ್ಯದ ಉದ್ದಗಲಕ್ಕೂ ದೇವಾಲಯಗಳಲ್ಲಿ ಭಕ್ತಿಸಾಗರವೇ ನೆರೆಯಿತ್ತಿದ್ದು, ಇದೆಲ್ಲವೂ ಉಚಿತ ಬಸ್ ಪ್ರಯಾಣದ ಫಲವಾಗಿದ್ದು, ಪವಿತ್ರ ಕ್ಷೇತ್ರಗಳ ದರ್ಶನ ಭಾಗ್ಯ ಮಹಿಳೆಯರಿಗೆ ದೊರಕಿದೆ. ದೇವಾಲಯಗಳ ಹುಂಡಿ ಹಣದಲ್ಲಿ ಹೆಚ್ಚಳವಾಗಿರುವುದೂ ಈ ಅಂಶವನ್ನು ದೃಢಪಡಿಸುತ್ತದೆ. **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಆಧಾರ್ ಕಾರ್ಡ್** ಪ್ರತಿ ಮತ್ತಿತರ ಗುರುತಿನ ಪುರಾವೆಯಾಗಿ ತೋರಿಸಿ (**ಚುನಾವಣಾ ಗುರುತಿನ ಚೀಟಿ,** ಸ್ಮಾರ್ಟ್ ಕಾರ್ಡ್ ಅಂದರೆ **ಇತರೆ ಗುರುತಿನ ಚೀಟಿ)** ಮಹಿಳೆಯರು ಉಚಿತ ಟಿಕೆಟ್ ಪಡೆದು (ಕರ್ನಾಟಕದಲ್ಲಿ) ಇಚ್ಛಿಸಿದಲ್ಲಿಗೆ ಸ್ವತಂತ್ರವಾಗಿ ಪ್ರಯಾಣಿಸುತ್ತಿದ್ದಾರೆ. ವಿಶೇಷವಾಗಿ ಉದ್ಯೋಗಸ್ಥ ಮಹಿಳೆಯರು ಕೆಲಸಕ್ಕೆ ಹೋಗಿಬರಲು ಮಾಡುತ್ತಿದ್ದ ವೆಚ್ಚ ಉಳಿತಾಯವಾಗಿದೆ. ದುಡಿಮೆಯ ಹಣ ಉಳಿದು, ಅವರ ಕುಟುಂಬ ನಿರ್ವಹಣೆಗೆ ಸಿಗುತ್ತಿದೆ. ಜೊತೆಗೆ, ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿನಿಯರಿಗೆ ಪ್ರಯೋಜನವಾಗಿದೆ. ಇದರಿಂದಾಗಿ ಬಹಳಷ್ಟು ವಿದ್ಯಾರ್ಥಿನಿಯರಿಗೆ ಪ್ರಯೋಜನವಾಗಿದೆ. ಇದರಿಂದಾಗಿ ಬಹಳಷ್ಟು ವಿದ್ಯಾರ್ಥಿನಿಯರ ಉನ್ನತ ಶಿಕ್ಷಣದ ಅವಕಾಶವೂ ಕೈಗೂಡಿದೆ (ವಿಜಯ ಕರ್ನಾಟಕ ಪತ್ರಿಕೆ 10 ಜನವರಿ 2026)

**ಕರ್ನಾಟಕ ರಾಜ್ಯದ ಸ್ತ್ರೀಯರಿಗೆ ಶಕ್ತಿ ಬಲ**

ಮಾನ್ಯ ಸಿದ್ದರಾಮಯ್ಯನವರು ಎರಡನೇ ಬಾರಿ ರಾಜ್ಯದ ಮುಖ್ಯಮಂತ್ರಿಯಾದ ಬಳಿಕ ಜಾರಿಗೆ ತಂದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಮೊದಲಬಾರಿಗೆ ತಂದಿದ್ದೇ ಶಕ್ತಿಯೋಜನೆ 2023ರ ಜೂನ್ 11 ರಂದು ಈ ಯೋಜನೆಗೆ ಚಾಲನೆ ದೊರೆಯಿತು. ಈ ಯೋಜನೆ ರಾಜ್ಯದ ಸಾಮಾನ್ಯ ವರ್ಗದ ಮಹಿಳೆಯರು ಅದರಲ್ಲಿಯೂ ಶಾಲಾ–ಕಾಲೇಜು ವಿದ್ಯಾರ್ಥಿನಿಯರು, ಕೆಲಸಕ್ಕೆ ಹೋಗುವ ಮಹಿಳೆಯರಿಗೆ ವರವಾಗಿ ಪರಿಣಮಿಸಿತು. ಟಿಕೇಟ್ ರಹಿತ ಪ್ರಯಾಣದಿಂದ ಶೇಕಡ 82ರಷ್ಟು ಮಹಿಳೆಯರು ವಾರಕ್ಕೆ 15,000ರೂ ವರೆಗೂ ಹಣ ಉಳಿಸಿ ಅದನ್ನು ಅನ್ಯ ಕೆಲಸಕ್ಕೆ ಬಳಸಿ ಸಂತೃಪ್ತ ಜೀವನ ನಡೆಸುವಂತಾಗಿದೆ. ಪ್ರಸ್ತುತ ನಾಲ್ಕು ನಿಗಮ ಸೇರಿ ಒಟ್ಟು 639 ಕೋಟಿಗೂ ಹೆಚ್ಚು ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು ಇದರ ಟಿಕೆಟ್ ಮೌಲ್ಯ ಬರೋಬ್ಬರಿ ರೂ 16,488 ಕೋಟಿ ರಷ್ಟಾಗುತ್ತದೆ. (ಕನ್ನಡ ಪ್ರಭ 10/01/2026).

**ಶಕ್ತಿಗೆ ಪ್ರಶಸ್ತಿಯ ಗರಿ**

ಶಕ್ತಿ ಯೋಜನೆಯಡಿ ರಾಜ್ಯದ ಹೆಣ್ಣು ಮಕ್ಕಳು ಇದುವರೆಗೂ 617 ಕೋಟಿಗೂ ಹೆಚ್ಚು ಟ್ರಿಪ್ಪುಗಳ ಉಚಿತ ಸಂಚಾರ ಮಾಡಿದ್ದಾರೆ. ಕಳೆದ ಅಕ್ಟೋಬರ್‌ನಲ್ಲೇ ಇದು ವಿಶ್ವದಾಖಲೆಗೆ ಸೇರ್ಪಡೆಯಾಗಿದೆ. ಇದಕ್ಕಾಗಿ ಕೆಎಸ್‌ಆರ್‌ಟಿಸಿಗೆ ಇಂಟರ್ ನ್ಯಾಷ್ನಲ್ ಬುಕ್ ಆಫ್ ರೆಕಾರ್ಡ್ಸ್ ಹಾಗೂ ವರ್ಲ್ಡ್ ರೆಕಾರ್ಡ್ ಆಫ್ ಎಕ್ಸಲೆನ್ಸ್ ಪ್ರಶಸ್ತಿ ಲಭಿಸಿದೆ. ಇನ್ನು ಶಕ್ತಿಯೋಜನೆಗಾಗಿ 2025ರ ವರ್ಷಾಂತ್ಯದ ವರೆಗೆ ಸರ್ಕಾರ ಸುಮಾರು 15,887 ಕೋಟಿ ರೂಗಳಷ್ಟು ಅನುದಾನ ವೆಚ್ಚಮಾಡಿದೆ. (ಕನ್ನಡ ಪ್ರಭ 10/01/2026).

**ಅಧ್ಯಯನದ ಉದ್ದೇಶಗಳು:**

1. ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದು.
2. ಮಹಿಳಾ ಸಬಲೀಕರಣದಲ್ಲಿ ಶಕ್ತಿಯೋಜನೆಯ ಪಾತ್ರವನ್ನು ತಿಳಿಯುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು:**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ/ದತ್ತಾಂಶ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರಸಾಧನಗಳನ್ನು ಬಳಸಿಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳೆರಡರಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಾಧ್ಯಯನ ಕಾರ್ಯವನ್ನು ಕೈಗೊಂಡು ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂದರ್ಶನಾ ಅನುಸೂಚಿಯನ್ನು ಬಳಸಿಕೊಂಡು ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಸಂದರ್ಶಿತರನ್ನು ಭೇಟಿಮಾಡಿ ನಾವೇ ಅವರಿಗೆ ಪ್ರಶ್ನೆಗಳನ್ನು ಕೇಳಿ ನಾವೇ ಉತ್ತರವನ್ನು ಬರೆದುಕೊಳ್ಳುವ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಅಧ್ಯಯನ ಕಾರ್ಯಕ್ಷೇತ್ರ ಮತ್ತು ಜನಸಂಖ್ಯಾ ಮಾದರಿಯ ಆಯ್ಕೆ**

ಪ್ರಸ್ತುತ ಅಧ್ಯಯನವು ಶಕ್ತಿಯೋಜನೆ ಮತ್ತು ಮಹಿಳಾ ಸಬಲೀಕರಣ ಚಿತ್ರದುರ್ಗ ತಾಲ್ಲೂಕಿಗೆ ಸಂಬಂಧಿಸಿದಂತೆ ಎಂಬ ವಿಷಯವನ್ನು ಚಿತ್ರದುರ್ಗ ತಾಲ್ಲೂಕಿಗೆ ಸೀಮಿತಗೊಳಿಸಿ 50 ಜನ ಮಹಿಳಾ ಸದಸ್ಯರನ್ನು ಸರಳಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆಮಾಡಿಕೊಂಡು ಅಗತ್ಯ ಸಂಶೋಧನಾ ತಂತ್ರ ಹಾಗೂ ವಿಧಾನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ಸಂಗ್ರಹಣೆ:**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಣೆಮಾಡುವುದು ಸೂಕ್ತವಾಗಿದೆ. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ/ಅನುಷಂಗಿಕ ಮೂಲಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಾಥಮಿಕ ಮೂಲಗಳು ಅಧ್ಯಯನ ಕ್ಷೇತ್ರದಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವುದಾಗಿದೆ. ಮಾಹಿತಿ ಸಂಗ್ರಹಣೆಯ ಮೂಲಗಳಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ. ಅವುಗಳೆಂದರೆ.

**ಪ್ರಾಥಮಿಕ ಮಾಹಿತಿ:** ಸಂಶೋಧನಾ ಅನುಸೂಚಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕರು ಕಾರ್ಯಪ್ರವೃತ್ತರಾಗಿದ್ದು, ವಾಸ್ತವಿಕ ಕ್ಷೇತ್ರದಿಂದ ತಾವೇ ನೇರವಾಗಿ ಮಾಹಿತಿದಾರರನ್ನು

ಭೇಟಿಮಾಡಿ, ಅವಲೋಕಿಸಿ, ಸಂದರ್ಶನಕ್ಕೆ ಒಳಪಡಿಸಿ ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ

**ಆನುಷಂಗಿಕ/ಮಾಧ್ಯಮಿಕ ಮಾಹಿತಿ:** ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಮಾಧ್ಯಮಿಕ ಮಾಹಿತಿಯನ್ನು ಪುಸ್ತಕಗಳು, ಗ್ರಂಥಗಳು, ಪತ್ರಿಕೆಗಳು, ಅಂತರ್ಜಾಲ, ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಸಮೀಕ್ಷಾ ವರದಿಗಳು. ಮಹಾಪ್ರಬಂಧಗಳು ಇನ್ನು ಮುಂತಾದವುಗಳಿಂದ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿಯ ವಿಶ್ಲೇಷಣೆ:**

**ಕೋಷ್ಟಕ–1 ಮಾಹಿತಿದಾರರ ವಯೋಮಾನದ ವಿವರ**

ಭಾರತೀಯ ಸಮಾಜದಲ್ಲಿ ವಯೋಗುಂಪುಗಳು ಯಾವುದೇ ಒಂದು ಸಂಗತಿಯನ್ನು ಅಥವಾ ಘಟನೆಯನ್ನು ಸಾಕ್ಷೀಕರಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ವ್ಯಕ್ತಿಯ ಜೀವನದ ಕಾಲಗಣನೆಗೆ ಮಾತ್ರವಲ್ಲದೆ, ಜ್ಞಾನ, ಸಾಮರ್ಥ್ಯ, ದುಡಿಮೆ ಹಾಗೂ ಇತರ ವಿವಿಧ ಅನುಭವಗಳ ಸಂಕೇತವಾಗಿದೆ.

| **ವಯೋಮಾನ (ವರ್ಷ)** | **ಆವೃತ್ತಿ** | **ಶೇಕಡವಾರು** |
|---|---|---|
| 15–25 | 10 | 20% |
| 26–35 | 20 | 40% |
| 36–45 | 15 | 30% |
| 45ವರ್ಷಕ್ಕಿಂತ ಹೆಚ್ಚು | 05 | 10% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ವಯೋಮಾನದ ವಿವರಗಳನ್ನು ನೀಡಲಾಗಿದೆ. ಒಟ್ಟು ಸಂದರ್ಶಿತರಲ್ಲಿ, ಶೇಕಡ 20ರಷ್ಟು 15ರಿಂದ 25 ವರ್ಷ ವಯಸ್ಸಿನವರು, ಶೇಕಡ 40ರಷ್ಟು 26ರಿಂದ 35 ವರ್ಷ ವಯಸ್ಸಿನವರು, ಶೇಕಡ 30ರಷ್ಟು 36ರಿಂದ 45 ವರ್ಷ ವಯಸ್ಸಿನವರು, ಶೇಕಡ 10ರಷ್ಟು 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಕಂಡು ಬಂದಿದ್ದಾರೆ. ಕಾರಣ 26ರಿಂದ 45 ವರ್ಷ ವಯಸ್ಸಿನವರಲ್ಲಿ ದುಡಿಯುವವರು ಹೆಚ್ಚಿರುತ್ತಾರೆ. ಹಾಗಾಗಿ 26ರಿಂದ 45 ವರ್ಷ ವಯಸ್ಸಿನವರು ಶೇಕಡ 70ರಷ್ಟು ಕಂಡು ಬಂದಿದ್ದಾರೆ.

**ಕೋಷ್ಟಕ–2 ಮಾಹಿತಿದಾರರ ಶೈಕ್ಷಣಿಕ ಮಟ್ಟದ ವಿವರ**

ಅನಾದಿಕಾಲದಿಂದಲೂ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ಶಿಕ್ಷಣವು ಮಾನವನ ಮೂಲಭೂತ ಹಕ್ಕು. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವ ರೂಪುಗೊಳ್ಳಲು ಎಷ್ಟು ಮುಖ್ಯವೋ ಹಾಗೆಯೆ ಸಮಾಜದ ಸ್ಥಿರತೆ, ಭದ್ರತೆ ಹಾಗೂ ಮುಂದುವರೆಯುವಿಕೆಗೆ ಅತ್ಯಗತ್ಯವಾಗಿದೆ. ವ್ಯಕ್ತಿಯ ವ್ಯಕ್ತಿತ್ವ, ಜ್ಞಾನ ಹಾಗೂ ಸಾಮಾಜಿಕ ಸ್ಥಾನಮಾನ ಹೆಚ್ಚಾಗಲು ಶಿಕ್ಷಣವು ಸಂಜೀವಿನಿಯಾಗಿದೆ.

| **ಶೈಕ್ಷಣಿಕ ಮಟ್ಟ** | **ಆವೃತ್ತಿ** | **ಶೇಕಡವಾರು** |
|---|---|---|
| ಅನಕ್ಷರಸ್ಥರು | 02 | 04% |
| ಪ್ರಾಥಮಿಕ ಶಿಕ್ಷಣ | 17 | 34% |
| ಪ್ರೌಢ ಶಿಕ್ಷಣ | 15 | 30% |
| ಪದವಿ ಪೂರ್ವ ಶಿಕ್ಷಣ | 05 | 10% |
| ಪದವಿ ಶಿಕ್ಷಣ | 05 | 10% |
| ಸ್ನಾತಕೋತ್ತರ ಪದವಿ | 04 | 08% |
| ಇತರೆ | 02 | 04% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಶೈಕ್ಷಣಿಕ ಮಟ್ಟದ ವಿವರಗಳನ್ನು ತಿಳಿಸಲಾಗಿದ್ದು, ಒಟ್ಟು ಮಾಹಿತಿದಾರರಲ್ಲಿ ಶೇಕಡ 4ರಷ್ಟು ಅನಕ್ಷರಸ್ಥರು, ಶೇಕಡ 34ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದವರು, ಶೇಕಡ 30ರಷ್ಟು ಪ್ರೌಢ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಪೂರ್ವ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಶಿಕ್ಷಣವನ್ನು ಪಡೆದವರು ಶೇಕಡ 4ರಷ್ಟು ಸ್ನಾತಕೋತ್ತರ ಪದವಿಯನ್ನು ಪಡೆದವರು ಕಂಡು ಬಂದಿದ್ದಾರೆ. ಇಲ್ಲಿ ಹೆಚ್ಚಿನವರು ಅಂದರೆ ಶೇಕಡ 34ರಷ್ಟು ಜನರು ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿದ್ದು, ಮಧ್ಯವಯಸ್ಸಿನವರನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ, ಬಡತನ ಹಾಗೂ ಇತರೆ ಕಾರಣಗಳಿಂದಾಗಿ ತಮ್ಮ ಶಿಕ್ಷಣವನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದಲ್ಲಿಯೇ ಮೊಟಕುಗೊಳಿಸಿದ್ದಾರೆ.

**ಕೋಷ್ಟಕ–3 ಮಾಹಿತಿದಾರರ ಧರ್ಮದ ವಿವರ**

ಧರ್ಮವು ಮಾನವನ ಬದುಕಿನ ಎಲ್ಲಾ ಸ್ತರಗಳನ್ನು ಅಂದರೆ ಹುಟ್ಟಿನಿಂದ ಸಾವಿನವರೆಗೆ ಹಲವಾರು ನಂಬಿಕೆ, ಆಚರಣೆ ವಿಧಿ–ವಿಧಾನ, ಪದ್ಧತಿಗಳು, ನೈತಿಕತೆಯನ್ನು ಒಳಗೊಂಡಿದೆ. ಧರ್ಮವು ಜೀವನದ ಗುರಿ ಮತ್ತು ಅರ್ಥವನ್ನು ತಿಳಿಸುತ್ತದೆ.

| **ಧರ್ಮ** | **ಆವೃತ್ತಿ** | **ಶೇಕಡವಾರು** |
|---|---|---|
| ಹಿಂದೂ | 35 | 70% |
| ಇಸ್ಲಾಂ/ಮುಸಲ್ಮಾನ | 10 | 20% |
| ಕ್ರೈಸ್ತ | 05 | 10% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಧರ್ಮದ ವಿವರಗಳನ್ನು ತಿಳಿಸಲಾಗಿದ್ದು. ಒಟ್ಟು ಮಾಹಿತಿದಾರರಲ್ಲಿ ಶೇಕಡ 70ರಷ್ಟು ಹಿಂದುಗಳು, ಶೇಕಡ 20ರಷ್ಟು ಮುಸಲ್ಮಾನರು ಹಾಗೂ ಶೇಕಡ 10ರಷ್ಟು ಕ್ರೈಸ್ತರು ಕಂಡು ಬಂದಿದ್ದಾರೆ

**ಕೋಷ್ಟಕ–4 ಮಾಹಿತಿದಾರರ ಜಾತಿಯ ವಿವರ**

ಭಾರತವು ಹಲವಾರು ಧರ್ಮ, ಜಾತಿ ಜನಾಂಗಗಳ ನೆಲೆವೀಡು. ಜಾತಿಯು ಭಾರತದ ಜೀವನ ದರ್ಶನ, ಧಾರ್ಮಿಕತೆ ರೂಢಿ–ಸಂಪ್ರದಾಯ, ವಿವಾಹ, ಕುಟುಂಬ, ಆಹಾರ–ವಿಹಾರ, ವೇಷ–ಭೂಷಣ, ಆಹಾರ ಅಭ್ಯಾಸಗಳು, ಅಭಿರುಚಿ ಆಸಕ್ತಿ, ಮೊದಲಾದವುಗಳೊಂದಿಗೆ ಹಾಸು ಹೊಕ್ಕಾಗಿ ಸೇರಿಕೊಂಡಿದೆ. ವ್ಯಕ್ತಿಗಳ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ಜಾತಿಯು ನಿರ್ಣಾಯಕವಾಗಿದೆ.

| **ಜಾತಿಯ ವಿವರ** | **ಆವೃತ್ತಿ** | **ಶೇಕಡವಾರು** |
|---|---|---|
| ಪರಿಶಿಷ್ಟ ಜಾತಿ | 20 | 40% |
| ಪರಿಶಿಷ್ಟ ಪಂಗಡ | 15 | 30% |
| ಇತರೆ ಹಿಂದುಳಿದ ವರ್ಗ | 15 | 30% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಜಾತಿಯ ವಿವರಗಳನ್ನು ತಿಳಿಸಲಾಗಿದ್ದು ಒಟ್ಟಾರೆ ಮಾಹಿತಿದಾರರಲ್ಲಿ ಶೇಕಡ 40ರಷ್ಟು ಪರಿಶಿಷ್ಟ ಜಾತಿಯವರು, ಶೇಕಡ 30ರಷ್ಟು ಪರಿಶಿಷ್ಟ ಪಂಗಡದವರು, ಶೇಕಡ 30ರಷ್ಟು ಇತರೆ ಹಿಂದುಳಿದ ವರ್ಗದವರಾಗಿದ್ದಾರೆ. ಪರಿಶಿಷ್ಟ ಜಾತಿಯವರು ಇಲ್ಲಿ ಹೆಚ್ಚಿದ್ದಾರೆ.

**ಕೋಷ್ಟಕ–5 ಮಾಹಿತಿದಾರರ ವೈವಾಹಿಕ ಸ್ಥಿತಿಯ ವಿವರ**

ವಿವಾಹವು ಮಾನವನ ಜೈವಿಕ, ಸಾಮಾಜಿಕ, ಲೈಂಗಿಕ ಹಾಗೂ ಮಾನಸಿಕ ಅಗತ್ಯತೆಗಳ ಪೂರೈಕೆಗಾಗಿ ಹುಟ್ಟಿಕೊಂಡ ಸಂಸ್ಥೆಯಾಗಿದೆ. ವಿವಾಹಕ್ಕೆ ಪ್ರತಿಯೊಂದು ಧರ್ಮದಲ್ಲಿಯೂ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ ಪುರುಷತ್ವದ ಪರಿಪೂರ್ಣತೆಗಾಗಿ ಹಾಗೂ ಸ್ತ್ರೀತ್ವದ ಪರಿಪೂರ್ಣತೆಗಾಗಿ ವಿವಾಹವು ಅನಿವಾರ್ಯವಾಗಿದೆ. ಮಾನವ ಸಮಾಜದ ನಿರಂತರತೆಗೆ ಅವಶ್ಯಕವಾಗಿದ್ದು, ಮಾನವನನ್ನು ಜವಾಬ್ದಾರನನ್ನಾಗಿ ಮಾಡುತ್ತದೆ. ಇದೊಂದು ಧಾರ್ಮಿಕ ಕಾರ್ಯವಾಗಿದೆ.

| **ವಿವಾಹದ ವಿವರ** | **ಆವೃತ್ತಿ** | **ಶೇಕಡವಾರು** |
|---|---|---|
| ವಿವಾಹಿತರು | 40 | 80% |
| ಅವಿವಾಹಿತರು | 08 | 16% |
| ವಿಧವೆಯರು | 02 | 04% |
| **ಒಟ್ಟು** | **50** | **100%** |

ಮೇಲಿನ ಕೋಷ್ಟಕದಲ್ಲಿ ಸಂದರ್ಶಿತರ ವಿವಾಹದ ವಿವರಗಳನ್ನು ನೀಡಲಾಗಿದ್ದು. ಒಟ್ಟು ಸಂದರ್ಶಿತರಲ್ಲಿ ಶೇಕಡ 80ರಷ್ಟು ವಿವಾಹಿತರು, ಶೇಕಡ 16ರಷ್ಟು ಅವಿವಾಹಿತರು, ಶೇಕಡ 04ರಷ್ಟು ವಿಧವೆಯರಿದ್ದಾರೆ.

**ಕೋಷ್ಟಕ-6 ಮಾಹಿತಿದಾರರ ಉದ್ಯೋಗದ ವಿವರ**

ಆಧುನಿಕ ಕಾಲದಲ್ಲಿ ಮಹಿಳೆಯರು ತಮ್ಮ ಕುಟುಂಬ ನಿರ್ವಹಣೆಗಾಗಿ, ಮಕ್ಕಳ ಪಾಲನೆಗಾಗಿ ಹಾಗೂ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಯಾವುದಾದರು ಒಂದು ವೃತ್ತಿಯಲ್ಲಿ ತೊಡಗುವುದು ಸಾಮಾನ್ಯವಾಗಿದೆ. ಏಕೆಂದರೆ ಆಧುನಿಕ ಜೀವನವು ದುಬಾರಿಯಾಗಿದೆ. ಹಾಗಾಗಿ ಪುರುಷರಲ್ಲದೆ ಮಹಿಳೆಯರೂ ಕೂಡ ಯಾವುದಾದರೊಂದು ಉದ್ಯೋಗವನ್ನು ಮಾಡುತ್ತಾರೆ.

| **ಉದ್ಯೋಗದ ವಿವರ** | **ಆವೃತ್ತಿ** | **ಶೇಕಡವಾರು** |
|---|---|---|
| ಕೂಲಿ ಕಾರ್ಮಿಕರು | 05 | 10% |
| ಖಾಸಗಿ ಕಾರ್ಮಿಕರು | 20 | 40% |
| ವ್ಯಾಪಾರಿಗಳು | 15 | 30% |
| ಇತರೆ | 10 | 20% |
| **ಒಟ್ಟು** | **50** | **100%** |

ಈ ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಉದ್ಯೋಗದ ವಿವರಗಳನ್ನು ತಿಳಿಸಲಾಗಿದ್ದು, ಒಟ್ಟು ಸಂದರ್ಶಿತರಲ್ಲಿ ಶೇಕಡ 10ರಷ್ಟು ಕೂಲಿ ಕಾರ್ಮಿಕರು, ಶೇಕಡ 40ರಷ್ಟು ಖಾಸಗಿ ಕಾರ್ಮಿಕರು, ಶೇಕಡ 30ರಷ್ಟು ವ್ಯಾಪಾರಿಗಳು ಹಾಗೂ ಶೇಕಡ 20ರಷ್ಟು ಇತರೆ ಕಾರ್ಮಿಕರು ಕಂಡು ಬಂದಿದ್ದಾರೆ.

**ಕೋಷ್ಟಕ–7 ಮಾಹಿತಿದಾರರ ಆದಾಯದ ವಿವರ**

ಮಾನವನು ತನ್ನ ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಹಣದ ಅವಷ್ಯಕತೆಯಿದೆ. ಹಣ ವಿಲ್ಲದೆ ಯಾವುದೇ ಕಾರ್ಯ ನಡೆಯುವುದಿಲ್ಲ. ಹಾಗೂ ಮಾನವನ ಆಸೆ–ಆಕಾಂಕ್ಷೆಗಳಿಗೆ ಮಿತಿಯಿಲ್ಲ. ಇವೆಲ್ಲವುಗಳ ಪೂರೈಕೆಗೆ ಆದಾಯದ ಅವಷ್ಯಕತೆಯಿದೆ.

| **ಆದಾಯದ ವಿವರ** | **ಆವೃತ್ತಿ** | **ಶೇಕಡ** |
|---|---|---|
| 5,000–10,000 | 10 | 20% |
| 10,000–20,000 | 30 | 60% |
| 20,000–30,000 | 05 | 10% |
| 30,000ಕ್ಕೂ ಮೇಲ್ಪಟ್ಟು | 05 | 10% |
| **ಒಟ್ಟು** | **50** | **100%** |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಆದಾಯದ ವಿವರಗಳನ್ನು ತಿಳಿಸಲಾಗಿದ್ದು, ಒಟ್ಟಾರೆ ಸಂದರ್ಶಿತರಲ್ಲಿ ಶೇಕಡ 20ರಷ್ಟು 5ಸಾವಿರದಿಂದ 10ಸಾವಿರ ಆದಾಯ ಉಳ್ಳವರು, ಶೇಕಡ 60ರಷ್ಟು 10ಸಾವಿರದಿಂದ 20ಸಾವಿರ ಆದಾಯ ಉಳ್ಳವರು, ಶೇಕಡ 10ರಷ್ಟು 20ಸಾವಿರದಿಂದ 30ಸಾವಿರ ಆದಾಯ

ಉಳ್ಳವರು, ಶೇಕಡ 10ರಷ್ಟು 30ಸಾವಿರಕ್ಕಿಂತಲೂ ಹೆಚ್ಚಿನ ಆದಾಯ ಉಳ್ಳವರು ಕಂಡು ಬಂದಿದ್ದಾರೆ, ಕಾರಣ ಹೆಚ್ಚಿನ ಮಹಿಳೆಯರು ಖಾಸಗಿ ಸಂಸ್ಥೆಗಳಲ್ಲಿ 10ರಿಂದ 20ಸಾವಿರಕ್ಕೆ ದುಡಿಯುತ್ತಾರೆ.

**ಕೋಷ್ಟಕ–8 ಶಕ್ತಿ ಯೋಜನೆಯ ಫಲಾನುಭವಿಗಳ ವಿವರ**

| **ಫಲಾನುಭವಿಗಳ ವಿವರ** | **ಆವೃತ್ತಿ** | **ಶೇಕಡ** |
|---|---|---|
| ಹೌದು | 50 | 100% |
| ಇಲ್ಲ | 00 | 00% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಫಲಾನುಭವಿಗಳ ವಿವರಗಳನ್ನು ತಿಳಿಸಲಾಗಿದ್ದು ಶೇಕಡ 100ರಷ್ಟು ಮಹಿಳೆಯರು ಇದರ ಫಲಾನುಭವಿಗಳಾಗಿದ್ದಾರೆ ಕಾರಣ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಎಲ್ಲಾ ಬಸ್ಸುಗಳಲ್ಲಿ ಅಂತರ್ ರಾಜ್ಯ ಸಂಪರ್ಕ ಕಲ್ಪಿಸುವ ಹಾಗೂ ರಾಜಹಂಸ ಬಸ್ಸುಗಳನ್ನು ಹೊರತುಪಡಿಸಿ ಪ್ರತಿಯೊಂದು ಬಸ್ಸಿನಲ್ಲಿಯೂ ರಾಜ್ಯದ ಎಲ್ಲಾ ವರ್ಗದ ಮಹಿಳೆಯರಿಗೂ ಉಚಿತ ಪ್ರಯಾಣದ ಅವಕಾಶವಿರುವುದರಿಂದ ಪ್ರತಿಯೊಬ್ಬರೂ ಅದರ ಫಲಾನುಭವಿಗಳಾಗಿದ್ದಾರೆ.

**ಕೋಷ್ಟಕ–9 ಉಚಿತವಾಗಿ ಪ್ರಯಾಣಿಸಿರುವುದರ ವಿವರ**

| **ಉಚಿತ ಪ್ರಯಾಣ** | **ಆವೃತ್ತಿ** | **ಶೇಕಡ** |
|---|---|---|
| ಹೌದು | 50 | 100% |
| ಇಲ್ಲ | 00 | 00% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಉಚಿತ ಪ್ರಯಾಣದ ವಿವರಗಳನ್ನು ತಿಳಿಸಲಾಗಿದ್ದು ಶೇಕಡ 100ರಷ್ಟು ಮಹಿಳೆಯರು ಉಚಿತ ಪ್ರಯಾಣವನ್ನು ಮಾಡಿದ್ದಾರೆ. ಕಾರಣ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಎಲ್ಲಾ ಬಸ್ಸುಗಳಲ್ಲಿ ಅಂತರ್ ರಾಜ್ಯ ಸಂಪರ್ಕ ಕಲ್ಪಿಸುವ ಹಾಗೂ ರಾಜಹಂಸ ಬಸ್ಸುಗಳನ್ನು ಹೊರತುಪಡಿಸಿ ಪ್ರತಿಯೊಂದು ಬಸ್ಸಿನಲ್ಲಿಯೂ ರಾಜ್ಯದ ಎಲ್ಲಾ ವರ್ಗದ ಮಹಿಳೆಯರಿಗೂ ಉಚಿತ ಪ್ರಯಾಣದ ಅವಕಾಶವಿರುವುದರಿಂದ ಪ್ರತಿಯೊಬ್ಬರೂ ಅದರ ಫಲಾನುಭವಿಗಳಾಗಿದ್ದಾರೆ.

**ಕೋಷ್ಟಕ–10 ಪ್ರಯಾಣ ವೆಚ್ಚದಲ್ಲಿ ಉಳಿತಾಯವಾಗಿರುವುದರ ವಿವರ**

| **ಪ್ರಯಾಣ ವೆಚ್ಚದ ಉಳಿತಾಯ** | **ಆವೃತ್ತಿ** | **ಶೇಕಡ** |
|---|---|---|
| ಹೌದು | 45 | 90% |
| ಇಲ್ಲ | 05 | 10% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಪ್ರಯಾಣ ವೆಚ್ಚದ ಉಳಿತಾಯದ ವಿವರಗಳನ್ನು ತಿಳಿಸಲಾಗಿದ್ದು ಶೇಕಡ 90ರಷ್ಟು ಮಹಿಳೆಯರು ಪ್ರಯಾಣ ವೆಚ್ಚದ ಉಳಿತಾಯವಾಗಿದೆ ಎಂತಲು, ಶೇಕಡ 10ರಷ್ಟು ಮಹಿಳೆಯರು ಉಳಿತಾಯವಾಗಿಲ್ಲವೆಂದು ತಿಳಿಸಿದ್ದಾರೆ. ಕಾರಣ ಅವರು ವಾಸಿಸುವ ಗ್ರಾಮಕ್ಕೆ ಸಾರಿಗೆ ಬಸ್ಸಿನ ಸೌಲಭ್ಯವಿಲ್ಲದಿರುವುದರಿಂದ ಅವರು ಖಾಸಗಿ ಬಸ್ಸುಗಳನ್ನೇ ಆಶ್ರಯಿಸಬೇಕಾಗಿದೆ.

**ಕೋಷ್ಟಕ–11 ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿರುವುದರ ವಿವರ**

| ಸ್ವಾವಲಂಬಿ ಬದುಕು | ಆವೃತ್ತಿ | ಶೇಕಡ |
|---|---|---|
| ಹೌದು | 45 | 90% |
| ಇಲ್ಲ | 05 | 10% |
| ಒಟ್ಟು | 50 | 100% |

ಈ ಮೇಲಿನ ಕೋಷ್ಟಕದಲ್ಲಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವ ವಿವರಗಳನ್ನು ತಿಳಿಸಲಾಗಿದ್ದು ಶೇಕಡ 90ರಷ್ಟು ಮಹಿಳೆಯರು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿದೆ ಎಂದಿದ್ದಾರೆ, ಶೇಕಡ 10ರಷ್ಟು ಮಹಿಳೆಯರು ಇಲ್ಲ ಎಂದಿದ್ದಾರೆ ಕಾರಣ ಬಡ ಮತ್ತು ಮಧ್ಯಮವರ್ಗದ ಮಹಿಳೆಯರಿಗೆ ಅನುಕೂಲವಾಗಿದ್ದರೆ ಶ್ರೀಮಂತ ವರ್ಗದ ಮಹಿಳೆಯರು ಅನುಕೂಲವಾಗಿಲ್ಲ ಎಂದಿದ್ದಾರೆ.

**ಕೋಷ್ಟಕ–12 ಬದುಕಿನಲ್ಲಿ ಸುಧಾರಣೆಯಾಗಿರುವುದರ ವಿವರ**

| **ಬದುಕಿನಲ್ಲಿ ಸುಧಾರಣೆ** | **ಆವೃತ್ತಿ** | **ಶೇಕಡ** |
|---|---|---|
| ಹೌದು | 50 | 100% |
| ಇಲ್ಲ | 00 | 00% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಬದುಕಿನ ಸುಧಾರಣೆಯ ವಿವರಗಳನ್ನು ತಿಳಿಸಲಾಗಿದ್ದು ಶೇಕಡ 100ರಷ್ಟು ಮಹಿಳೆಯರು ಬದುಕಿನಲ್ಲಿ ಸುಧಾರಣೆಯಾಗಿದೆ ಎಂದಿದ್ದಾರೆ ಕಾರಣ ಕೆಲಸಕಾರ್ಯಗಳಿಗೆ ಪ್ರಯಾಣ, ದೂರದ ಊರುಗಳಿಗೆ ಪ್ರಯಾಣ, ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಿಗೆ ಪ್ರಯಾಣ, ಆಸ್ಪತ್ರೆಗಳಿಗೆ, ಯಾತ್ರಾಸ್ಥಳಗಳಿಗೆ, ವ್ಯಾಪಾರ ವ್ಯವಹಾರಗಳಿಗೆ ದಿನ ನಿತ್ಯದ ದುಡಿಮೆಗೆ ತುಂಬಾ ಪ್ರಯೋಜನಕಾರಿಯಾಗಿದೆ ಎಂದಿದ್ದಾರೆ.

**ಕೋಷ್ಟಕ–13 ದುಡಿಮೆಯ ಹಣ ಉಳಿತಾಯ ವಾಗುತ್ತಿರುವುದರ ವಿವರ**

| **ಹಣದ ಉಳಿತಾಯ** | **ಆವೃತ್ತಿ** | **ಶೇಕಡ** |
|---|---|---|
| ಹೌದು | 50 | 100% |
| ಇಲ್ಲ | 00 | 00% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ದುಡಿಮೆಯ ಹಣದ ಉಳಿತಾಯದ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 100ರಷ್ಟು ಮಹಿಳೆಯರು ತಮ್ಮ ದುಡಿಮೆಯ ಹಣ ಉಳಿತಾಯವಾಗಿದೆ ಎಂದಿದ್ದಾರೆ. ಕಾರಣ ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರಿಗೆ, ದಿನಗೂಲಿ ಮಹಿಳೆಯರಿಗೆ, ಸಣ್ಣ ಪುಟ್ಟ ವ್ಯಾಪಾರಿಗಳಿಗೆ ತಾವು ಸಂಪಾದಿಸಿದ ಹಣದಲ್ಲಿ ಪ್ರಯಾಣಕ್ಕೆ ಬಹಳ ಖರ್ಚಾಗುತ್ತಿದ್ದು, ಉಚಿತ ಪ್ರಯಾಣದಿಂದ ಅವರಿಗೆ ತಮ್ಮ ಹಣದ ಉಳಿತಾಯವಾಗಿದೆ.

**ಕೋಷ್ಟಕ–14 ಕುಟುಂಬ ನಿರ್ವಹಣೆಗೆ ಅನುಕೂಲವಾಗಿರುವುದರ ವಿವರ**

| **ಕುಟುಂಬ ನಿರ್ವಹಣಯ ಅನುಕೂಲ** | **ಆವೃತ್ತಿ** | **ಶೇಕಡ** |
|---|---|---|
| ಹೌದು | 50 | 100% |
| ಇಲ್ಲ | 00 | 00% |
| **ಒಟ್ಟು** | **50** | **100%** |

ಈ ಮೇಲಿನ ಕೋಷ್ಟಕದಲ್ಲಿ ಕುಟುಂಬ ನಿರ್ವಹಣೆಯ ಅನುಕೂಲದ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 100ರಷ್ಟು ಮಹಿಳೆಯರು ತಮ್ಮ ದುಡಿಮೆಯ ಹಣ ಉಳಿತಾಯವಾಗಿ ಕುಟುಂಬ ನಿರ್ವಹಣೆಗೆ ಅನುಕೂಲವಾಗಿದೆ ಎಂದಿದ್ದಾರೆ. ಕಾರಣ ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರಿಗೆ, ದಿನಗೂಲಿ ಮಹಿಳೆಯರಿಗೆ, ಸಣ್ಣ ಪುಟ್ಟ ವ್ಯಾಪಾರಿಗಳಿಗೆ ತಾವು ಸಂಪಾದಿಸಿದ ಹಣದಲ್ಲಿ ಪ್ರಯಾಣಕ್ಕೆ ಬಹಳ ಖರ್ಚಾಗುತ್ತಿದ್ದು, ಉಚಿತ ಪ್ರಯಾಣದಿಂದ ಅವರಿಗೆ ತಮ್ಮ ಹಣದ ಉಳಿತಾಯವಾಗಿದೆ ಇದರಿಂದ ತಮ್ಮ ಕುಟುಂಬದ ನಿರ್ವಹಣೆಗೆ ಅನುಕೂಲವಾಗಿದೆ ಎಂದಿದ್ದಾರೆ.

**ಸಂಶೋಧನೆಯಿಂದ ವ್ಯಕ್ತವಾದ ಅಂಶಗಳು**

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಶಕ್ತಿಯೋಜನೆ (ವಿಶೇಷವಾಗಿ ಚಿತ್ರದುರ್ಗ ತಾಲೂಕಿಗೆ ಸಂಬಂಧಿಸಿದಂತೆ) ಎಂಬ ವಿಷಯದ ಅಧ್ಯಯನದಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗೆ ಸಂಬಂಧಿಸಿದಂತೆ ಹಾಗೂ ಈ ಯೋಜನೆಯಿಂದ ಮಹಿಳೆಯರು ಪಡೆದುಕೊಂಡ ಪ್ರಯೋಜನಗಳ ಬಗ್ಗೆ ಸಂಶೋಧನೆಯನ್ನು ಕೈಗೊಂಡಿದ್ದು, ಇದರಿಂದ ವ್ಯಕ್ತವಾದ ಅಂಶಗಳು ಈ ಕೆಳಗಿನಂತಿವೆ.

**ಸಂಶೋಧನೆಯಿಂದ ವ್ಯಕ್ತವಾದ ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಿತಿಗತಿ:**

- ವಯೋಮಾನಕ್ಕೆ ಸಂಬಂಧಿಸಿದಂತೆ 26ರಿಂದ 45 ವರ್ಷ ವಯಸ್ಸಿನವರು ಶೇಕಡ 70ರಷ್ಟು ಕಂಡು ಬಂದಿದ್ದಾರೆ. ಕಾರಣ ಈ ವಯಸ್ಸಿನವರಿಗೆ ಕುಟುಂಬದ ಜವಾಬ್ದಾರಿ ಅಧಿಕವಾಗಿರುತ್ತದೆ.
- ಶೈಕ್ಷಣಿಕ ಮಟ್ಟಕ್ಕೆ ಸಂಬಂಧಿಸಿದಂತೆ ಇಲ್ಲಿ ಹೆಚ್ಚಿನವರು ಅಂದರೆ ಶೇಕಡ 34ರಷ್ಟು ಜನರು ಪ್ರಾಥಮಿಕ ಶಿಕ್ಷಣವನ್ನು ಹಾಗೂ ಶೇಕಡ 30ರಷ್ಟು ಪ್ರೌಢ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಕಾರಣ ಬಡತನ

ಹಾಗೂ ಇತರೆ ಕಾರಣಗಳಿಂದಾಗಿ ತಮ್ಮ ಶಿಕ್ಷಣವನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದಲ್ಲಿಯೇ ಮೊಟಕುಗೊಳಿಸಿದ್ದಾರೆ.

- ಧರ್ಮಕ್ಕೆ ಸಂಬಂಧಿಸಿದಂತೆ ಒಟ್ಟು ಮಾಹಿತಿದಾರರಲ್ಲಿ ಶೇಕಡ 70ರಷ್ಟು ಹಿಂದುಗಳು, ಶೇಕಡ 20ರಷ್ಟು ಮುಸಲ್ಮಾನರು ಹಾಗೂ ಶೇಕಡ 10ರಷ್ಟು ಕ್ರೈಸ್ತರು ಕಂಡು ಬಂದಿದ್ದಾರೆ.
- ಜಾತಿಗೆ ಸಂಬಂಧಿಸಿದಂತೆ ಒಟ್ಟಾರೆ ಮಾಹಿತಿದಾರರಲ್ಲಿ ಶೇಕಡ 40ರಷ್ಟು ಪರಿಶಿಷ್ಟ ಜಾತಿಯವರು, ಶೇಕಡ 30ರಷ್ಟು ಪರಿಶಿಷ್ಟ ಪಂಗಡದವರು, ಶೇಕಡ 30ರಷ್ಟು ಇತರೆ ಹಿಂದುಳಿದ ವರ್ಗದವರಾಗಿದ್ದಾರೆ.
- ಒಟ್ಟು ಸಂದರ್ಶಿತರಲ್ಲಿ ಶೇಕಡ 80ರಷ್ಟು ವಿವಾಹಿತರು, ಶೇಕಡ 16ರಷ್ಟು ಅವಿವಾಹಿತರು, ಶೇಕಡ 04ರಷ್ಟು ವಿಧವೆಯರಿದ್ದಾರೆ.
- ಉದ್ಯೋಗಕ್ಕೆ ಸಂಬಂಧಿಸಿದಂತೆ ಒಟ್ಟು ಸಂದರ್ಶಿತರಲ್ಲಿ ಶೇಕಡ 10ರಷ್ಟು ಕೂಲಿ ಕಾರ್ಮಿಕರು, ಶೇಕಡ 40ರಷ್ಟು ಖಾಸಗಿ ಕಾರ್ಮಿಕರು, ಶೇಕಡ 30ರಷ್ಟು ವ್ಯಾಪಾರಿಗಳು ಹಾಗೂ ಶೇಕಡ 20ರಷ್ಟು ಇತರೆ ಕಾರ್ಮಿಕರು ಕಂಡು ಬಂದಿದ್ದಾರೆ.
- ಆದಾಯಕ್ಕೆ ಸಂಬಂಧಿಸಿದಂತೆ ಒಟ್ಟು ಸಂದರ್ಶಿತರಲ್ಲಿ ಶೇಕಡ 20ರಷ್ಟು 5ಸಾವಿರದಿಂದ 10ಸಾವಿರ ಆದಾಯ ಉಳ್ಳವರು, ಶೇಕಡ 60ರಷ್ಟು 10ಸಾವಿರದಿಂದ 20ಸಾವಿರ ಆದಾಯ ಉಳ್ಳವರು, ಶೇಕಡ 10ರಷ್ಟು 20ಸಾವಿರದಿಂದ 30ಸಾವಿರ ಆದಾಯ ಉಳ್ಳವರು, ಶೇಕಡ 10ರಷ್ಟು 30ಸಾವಿರಕ್ಕಿಂತಲೂ ಹೆಚ್ಚಿನ ಆದಾಯ ಉಳ್ಳವರು ಕಂಡು ಬಂದಿದ್ದಾರೆ.

**ಶಕ್ತಿ ಯೋಜನೆಗೆ ಸಂಬಂಧಿಸಿದಂತೆ ಸಂಶೋಧನೆಯಿಂದ ವ್ಯಕ್ತವಾದ ಅಂಶಗಳು**

- ಫಲಾನುಭವಿಗಳಿಗೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ಇದರ ಫಲಾನುಭವಿಗಳಾಗಿದ್ದಾರೆ.
- ಪ್ರಯಾಣದ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ಉಚಿತ ಪ್ರಯಾಣವನ್ನು ಮಾಡಿದ್ದಾರೆ.
- ಪ್ರಯಾಣದ ವೆಚ್ಚದ ಉಳಿತಾಯದ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 90ರಷ್ಟು ಮಹಿಳೆಯರು ಪ್ರಯಾಣ ವೆಚ್ಚದ ಉಳಿತಾಯವಾಗಿದೆ ಎಂದಿದ್ದಾರೆ. ಕಾರಣ ಉಚಿತ ಪ್ರಯಾಣ.
- ಸ್ವಾವಲಂಬಿ ಬದುಕಿಗೆ ಸಂಬಂಧಿಸಿದಂತೆ ಶೇಕಡ 90ರಷ್ಟು ಮಹಿಳೆಯರು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ನೆರವಾಗಿದೆ ಎಂದಿದ್ದಾರೆ,
- ಬದುಕಿನಲ್ಲಿ ಸುಧಾರಣೆಗೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ಬದುಕಿನಲ್ಲಿ ಸುಧಾರಣೆಯಾಗಿದೆ ಎಂದಿದ್ದಾರೆ.

- ದುಡಿಮೆಯ ಹಣದ ಉಳಿತಾಯಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ತಮ್ಮ ದುಡಿಮೆಯ ಹಣ ಉಳಿತಾಯವಾಗಿದೆ ಎಂದಿದ್ದಾರೆ.
- ಕುಟುಂಬ ನಿರ್ವಹಣೆಯ ಅನುಕೂಲದ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ತಮ್ಮ ದುಡಿಮೆಯ ಹಣಉಳಿತಾಯವಾಗಿ ಕುಟುಂಬ ನಿರ್ವಹಣೆಗೆ ಅನುಕೂಲವಾಗಿದೆ ಎಂದಿದ್ದಾರೆ.

**ಸಲಹೆಗಳು:**

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಶಕ್ತಿಯೋಜನೆಯು ಮಹಿಳೆಯರ ಸಬಲೀಕರಣದಲ್ಲಿ ಮಹತ್ವದ ಯೋಜನೆಯಾಗಿದ್ದು ಬಹಳಷ್ಟು ಬಡಕುಟುಂಬದ ಹಾಗೂ ಅಂಚೀಕರಣಗೊಂಡ ಸಮುದಾಯದ ಮಹಿಳೆಯರು ಇದರ ಪ್ರಯೋಜನವನ್ನು ಪಡೆದು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಂಡಿವೆ ಹಾಗೂ ಎಷ್ಟೋ ಬಡ ಹೆಣ್ಣು ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರೆಸಿಕೊಂಡು ಹಾಗೂ ಸ್ವಉದ್ಯೋಗವನ್ನು ಮಾಡುತ್ತಾ ತಮ್ಮ ಜೀವನವನ್ನು ಸುಧಾರಿಸಿಕೊಂಡಿದ್ದಾರೆ.

- ಶಕ್ತಿಯೋಜನೆಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶಗಳಿಗೆ ಇನ್ನೂ ಹೆಚ್ಚಿನ ಬಸ್ಸುಗಳ ಅವಶ್ಯಕತೆಯಿದೆ.
- ಇನ್ನೂ ಹೆಚ್ಚಿನ ಮಟ್ಟದ ನಿರ್ವಹಣೆಯ ಅವಶ್ಯಕತೆಯಿದೆ.
- ಬಸ್ಸುಗಳಲ್ಲಿ ಮಹಿಳಾ ಪ್ರಯಾಣಿಕರೇ ಹೆಚ್ಚಾಗಿರುವುದರಿಂದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಶಾಲಾ–ಕಾಲೇಜುಗಳಿಗೆ ತೆರಳಲು ಸಮಸ್ಯೆಯಾಗುತ್ತಿದೆ.

**ಪರಾಮರ್ಶನ ಗ್ರಂಥಗಳು**


- ಶಂಕರ್ ರಾವ್ ಚ.ನ. (2015–16) "ಮಹಿಳಾ ಅಧ್ಯಯನ ಪ್ರವೇಶ", ಜೈ ಭಾರತ್ ಪ್ರಕಾಶನ ಮಂಗಳೂರು
- ಶಂಕರ್ ರಾವ್ ಚ.ನ. (2016–1) "ಮಹಿಳಾ ಅಧ್ಯಯನ ಪರಿಚಯ", ಜೈ ಭಾರತ್ ಪ್ರಕಾಶನ ಮಂಗಳೂರು
- ವಿನಿತ ಪಾಂಡೆ (2016) "ಇಂಡಿಯನ್ ಸೊಸೈಟಿ ಅಂಡ್ ಕಲ್ಚರ್", ರಾವತ್ ಪಬ್ಲಿಕೇಷನ್ಸ್ ಜೈಪುರ.
- ಅಭಿಜಿತ್ ಕುಂದು, ನುಪೂರ್ಣಿಮ ಯಾದವ್ (2021) "ಸೋಶಿಯಾಲಜಿ ಆಫ್ ಇಂಡಿಯಾ" ಸೇಜ್ ಟೆಕ್ಸ್ಟ್ಸ್, ನ್ಯೂದೆಹಲಿ.
- ಎಹ್.ಕೆ. ರಾವತ್ (2013) "ಕಾಂಟೆಮ್ಪರರಿ ಸೋಶಿಯಾಲಜಿ" ರಾವತ್ ಪಬ್ಲಿಕೇಷನ್ಸ್, ನ್ಯೂದೆಹಲಿ.
- ಹರ್ಲಾಂಬೋಸ್ & ಹೋಲ್ಬಾರ್ನ್ (2021), ಸೋಶಿಯಾಲಜಿ ಥೀಮ್ಸ್ ಅಂಡ್ ಪರ್ಸ್ಪೆಕ್ಟ್ವೀಸ್. 8ಎಡಿಷನ್, ಕೋಲಿನ್ಸ್ ಪಬ್ಲಿಕೇಷನ್ಸ್, ಯುನೈಟೆಡ್ (ಯು.ಕೆ), ಕಿಂಗ್‌ಡಮ್.

- ರಾಮ್ ಅಹುಜಾ (2018) ರೀಸರ್ಚ್ ಮೆಥಡ್ಸ್ , ರಾವತ್ ಪಬ್ಲಿಕೇಷನ್ಸ್, ನ್ಯೂದೆಹಲಿ.
- ಸಿ.ಆರ್. ಕೊಠಾರಿ–ಗೌರವ್ ಗರ್ಗ್, (2014), ನ್ಯೂ ಏಜ್ ಇಂಟರ್ ನ್ಯಾಷ್ನಲ್ ಪಬ್ಲೀಷರ್ಸ್, ಲಂಡನ್, ನ್ಯೂದೆಹಲಿ.
- ಡಿ.ಕೆ. ಲಾಲ್ ದಾಸ್ (2014) **"ಪ್ರಾಕ್ಟೀಸ್ ಆಫ್ ಸೋಶಿಯಲ್ ರೀಸರ್ಚ್"**, ರಾವತ್ ಪಬ್ಲಿಕೇಷನ್ಸ್, ನ್ಯೂದೆಹಲಿ.
- ದಿನಪತ್ರಿಕೆಗಳು
- ಹಿಂದೂ ದಿನಪತ್ರಿಕೆ
- ಪ್ರಜಾವಾಣಿ ದಿನಪತ್ರಿಕೆ
- ವಿಜಯ ಕರ್ನಾಟಕ ದಿನಪತ್ರಿಕೆ
- ಕನ್ನಡಪ್ರಭ
- ವಿಜಯವಾಣಿ ದಿನ ಪತ್ರಿಕೆಗಳು.